**ಕರ್ನಾಟಕ ಸರ್ಕಾರ**

**(ವಿದ್ಯುತ್ ಪರಿವೀಕ್ಷಣಾಲಯ)**

ಸಂ: ಮುವಿಪ/ಅಮುವಿಪ/ವಿಪ(ಪ)/ 307-44 /2022-23

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ
2ನೇ ಮಹಡಿ, ನಿರ್ಮಾಣ ಭವನ,
ರಾಜಾಜಿನಗರ 1ನೇ ಬ್ಲಾಕ್,
ಡಾ। ರಾಜ್‌ಕುಮಾರ್ ರಸ್ತೆ,
ಬೆಂಗಳೂರು-560010.

ದಿನಾಂಕ : 06/05/2022

**ಸುತ್ತೋಲೆ**

ವಿಷಯ:ಮುಕ್ತ ವಿಶ್ವವಿದ್ಯಾನಿಲಯ, ದೂರ ಶಿಕ್ಷಣ, ಓಪನ್ ಸ್ಕೂಲ್ ಮತ್ತು ಬ್ರಿಡ್ಜ್ ಕೋರ್ಸ್ ವ್ಯವಸ್ಥೆಯ ಅಡಿಯಲ್ಲಿ ಪಡೆದಿರುವ ಡಿಪ್ಲೋಮೊ ಪ್ರಮಾಣ ಪತ್ರದ ಜೊತೆ ಕರ್ನಾಟಕ ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಂದ ಪಡೆದಿರುವ ಸಮಾನತೆ ಪತ್ರ (Equlivalent Certificate) ಸಲ್ಲಿಸುವ ಕುರಿತು.

**** **** ****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮುಕ್ತ ವಿಶ್ವವಿದ್ಯಾನಿಲಯ, ದೂರ ಶಿಕ್ಷಣ, ಓಪನ್ ಸ್ಕೂಲ್ ಮತ್ತು ಬ್ರಿಡ್ಜ್ ಕೋರ್ಸ್ ವ್ಯವಸ್ಥೆಯ ಅಡಿಯಲ್ಲಿ ಪಡೆದಿರುವ ಡಿಪ್ಲೋಮೊ ಪ್ರಮಾಣ ಪತ್ರವನ್ನು ಸಲ್ಲಿಸಿ ವಿದ್ಯುತ್ ಗುತ್ತಿಗೆ ಪರವಾನಗಿ ಹಾಗೂ ವಿದ್ಯುತ್ ಮೇಲ್ವಿಚಾರಕರ (ಸಾಮಾನ್ಯ) ರಹದಾರಿ ಪಡೆಯಲು ಅರ್ಜಿದಾರರು ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುತ್ತಿದ್ದು, ಸದರಿ ಪ್ರಮಾಣ ಪತ್ರವನ್ನು ಪರಿಗಣಿಸಿ ವಿದ್ಯುತ್ ಗುತ್ತಿಗೆ ಪರವಾನಗಿ ಹಾಗೂ ವಿದ್ಯುತ್ ಮೇಲ್ವಿಚಾರಕರ (ಸಾಮಾನ್ಯ) ರಹದಾರಿ ನೀಡುವ ಬಗ್ಗೆ ದಿನಾಂಕ: 30.04.2022 ರಂದು ನಡೆದ 108ನೇ ಪರವಾನಗಿ ಸಲಹಾ ಮತ್ತು ಪರೀಕ್ಷಾ ಮಂಡಳಿಯ ಸಭೆಯಲ್ಲಿ ಚರ್ಚಿಸಲಾಗಿ, ಅರ್ಜಿದಾರರು ದೂರ ಶಿಕ್ಷಣ, ಓಪನ್ ಸ್ಕೂಲ್ ಮತ್ತು ಬ್ರಿಡ್ಜ್ ಕೋರ್ಸ್ ವ್ಯವಸ್ಥೆಯ ಅಡಿಯಲ್ಲಿ ಪಡೆದಿರುವ ಡಿಪ್ಲೋಮೊ ಪ್ರಮಾಣ ಪತ್ರದ ಜೊತೆ **ಕರ್ನಾಟಕ ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಂದ ಪಡೆದಿರುವ ಸಮಾನತೆ ಪತ್ರವನ್ನು (Equlivalent Certificate)** ಸಹ ಸಲ್ಲಿಸಲು ಅರ್ಜಿದಾರರಿಗೆ ಮಾಹಿತಿ ಒದಗಿಸಲು ಹಾಗೂ ಸಮಾನತೆ ಪ್ರಮಾಣ ಪತ್ರವನ್ನು ಪಡೆದು ಸದರಿ ಡಿಪ್ಲೋಮೊ ಪ್ರಮಾಣ ಪತ್ರದೊಂದಿಗೆ ಅರ್ಜಿಯನ್ನು ಸಲ್ಲಿಸಿರುವ ಅರ್ಜಿದಾರರ ಅರ್ಜಿಗಳನ್ನು ಮಾತ್ರ ಪುರಸ್ಕರಿಸಿ, ಪರಿಶೀಲಿಸಿ ಕೇಂದ್ರ ಕಛೇರಿಗೆ ನಿಯಮಾನುಸಾರ ಸಲ್ಲಿಸಲು ಕ್ರಮವಹಿಸಲು ಸುತ್ತೋಲೆಯನ್ನು ಹೊರಡಿಸಲಾಗಿದೆ.

O/C

6/5/2022

ಮುಖ್ಯ ವಿದ್ಯುತ್ ಪರಿವೀಕ್ಷಕರು (ಪ್ರಭಾರ)

ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು,
ವಿದ್ಯುತ್ ಪರಿವೀಕ್ಷಣಾಲಯ,
ಬೆಂಗಳೂರು.

**ಪ್ರತಿಯನ್ನು:-**

1) ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ಮು.ಕ/ಕ.ಕ.